ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1086
ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು	ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	15-03-2021
ಉತ್ತರಿಸುವ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಕೋವಿಡ್ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಿಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳ ವಿವರಗಳನ್ನು ನೀಡುವುದು.	ಬಂದಿದೆ. ಸರ್ಕಾರ ತೆಗೆದುಕೊಂಡ ಕ್ರಮ: 1. RTPCR ಪರೀಕ್ಷೆಗಳನ್ನು ಹೆಚ್ಚಿಸಲಾಗುತ್ತಿದೆ. 2. ಕೇರಳ ಮತ್ತು ಮಹಾರಾಷ್ಟ್ರ ದಿಂದ ಬರುವವರಿಗೆ ಕೋವಿಡ್-19 ಪರೀಕ್ಷೆ ಮಾಡಿಸುವುದನ್ನು ಕಡ್ಡಾಯಗೊಳಿಸಲಾಗಿದೆ 3. ಮಾಸ್ಕ್ ಧರಿಸದೇ ಇರುವವರಿಗೆ ನಗರ ಪ್ರದೇಶಗಳಲ್ಲಿ ರೂ.200/- ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ರೂ. 100/- ದಂಡವನ್ನು ವಿಧಿಸಲಾಗುತ್ತಿದೆ. 4. ಸಾರ್ವಜನಿಕರು ಭಾಗವಹಿಸುವ ವಿವಿಧ ಸಮಾರಂಭಗಳು ಹಾಗೂ ಆಚರಣೆಗಳ ಸಂದರ್ಭಗಳಲ್ಲಿ ನಿಗದಿಪಡಿಸಿದ ಸಂಖ್ಯೆಯನ್ನು ಮೀರದಂತೆ ಸೂಚನೆಗಳನ್ನು ನೀಡಲಾಗಿದೆ. (ವಿವರವನ್ನು **ಅನುಬಂಧದಲ್ಲಿ** ನೀಡಲಾಗಿದೆ).
ಆ	ಕರ್ನಾಟಕ ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ಎಷ್ಟು ಲಸಿಕೆಗಳನ್ನು ತರಿಸಲಾಗಿದೆ; ಲಸಿಕೆ ಪಡೆದವರ ಮೇಲೆ ಅಡ್ಡ ಪರಿಣಾಮವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಜ್ಯದಲ್ಲಿ 33,19,760 -ಕೋವಿಶೀಲ್ಡ್ ಲಸಿಕೆ, 4,60,820. ಕೋವ್ಯಾಕ್ಸಿನ್ ಲಸಿಕೆ ಸರಬರಾಜಿಗಿರುತ್ತದೆ. ಲಸಿಕೆ ಪಡೆದ ಕೆಲವರಲ್ಲಿ ಅಡ್ಡ ಪರಿಣಾಮವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅವುಗಳಲ್ಲಿ, ಸೌಮ್ಯ ಪ್ರಮಾಣದ ಅಡ್ಡಪರಿಣಾಮಗಳು- 504, ಗಂಭೀರ 27, ತೀವ್ರ -1 ಪ್ರಕರಣಗಳು ವರದಿಯಾಗಿವೆ.
ಇ	ಕೋವಿಡ್ ಲಸಿಕೆಯ ಅಡ್ಡ ಪರಿಣಾಮದ ಬಗ್ಗೆ ಮಾಡುತ್ತಿರುವ ಅಪಪ್ರಚಾರವನ್ನು ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ಕೋವಿಡ್ ಲಸಿಕೆಯ ಅಡ್ಡ ಪರಿಣಾಮದ ಬಗ್ಗೆ ಮಾಡುತ್ತಿರುವ ಅಪಪ್ರಚಾರವನ್ನು ತಡೆಯಲು ಸರ್ಕಾರ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ: 1. ರಾಜ್ಯ ಮಟ್ಟದಲ್ಲಿ ಕೋವಿಡ್-19 ಲಸಿಕೆ ಮತ್ತು ಅಡ್ಡಪರಿಣಾಮಗಳ ಕುರಿತಂತೆ ಮಾಧ್ಯಮದವರಿಗೆ ತಿಳುವಳಿಕೆ ಕಾರ್ಯಕ್ರಮವನ್ನು ದಿನಾಂಕ: 17.02.2021 ರಂದು ನಡೆಸಲಾಗಿದೆ. 2. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕೋವಿಡ್ ಲಸಿಕೆಯ ಅಡ್ಡ ಪರಿಣಾಮದ ಕುರಿತಂತೆ ಮಾಧ್ಯಮಗಳಲ್ಲಿ ಪ್ರಕಟವಾಗಬಹುದಾದ ಅಡ್ಡಪರಿಣಾಮಗಳ ಬಗ್ಗೆ ಅಪಪ್ರಚಾರವನ್ನು ತಡೆಯಲು / ನಿರ್ವಹಿಸಲು ತರಬೇತಿ ನೀಡಲಾಗಿದೆ. 3. ಮಾಧ್ಯಮಗಳಲ್ಲಿ/ಪತ್ರಿಕೆಗಳಲ್ಲಿ ಅಡ್ಡಪರಿಣಾಮಗಳ ಕುರಿತು ಅಪಪ್ರಚಾರ ವರದಿಯಾದ ನಂತರ ಅದೇ ಮಾಧ್ಯಮದಲ್ಲಿ ಸರಿಯಾದ ಮಾಹಿತಿ ನೀಡಿ ಜನರ ಮನದಲ್ಲಿ ಉಂಟಾಗಬಹುದಾದ ಗೊಂದಲಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

		4. ರಾಜ್ಯ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ನಿಯಂತ್ರಣ ಘಟಕಗಳನ್ನು ಅನುಷ್ಠಾನಗೊಳಿಸಲಾಗಿದೆ. 5. ರಾಜ್ಯ ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಮಾಧ್ಯಮ ವಕ್ತಾರರನ್ನು ಗುರುತಿಸಲಾಗಿದ್ದು, ಅವರಿಗೆ ರಾಜ್ಯಮಟ್ಟದಿಂದ ತರಬೇತಿ ನೀಡಲಾಗಿದೆ. ಎಇಎಫ್ಐ ಕುರಿತ ಯಾವುದೇ ಸುಳ್ಳುವದಂತಿ ಅಪಪ್ರಚಾರಗಳು ಉಂಟಾದರೆ ಅವುಗಳ ಕುರಿತು ಮಾಧ್ಯಮಗಳಿಗೆ ಮತ್ತು ಸಾರ್ವಜನಿಕರಿಗೆ ಸೂಕ್ತ ಮಾಹಿತಿ ಮತ್ತು ವಿವರಣೆಯನ್ನು ನೀಡಲು ತಿಳಿಸಲಾಗಿದೆ. 6. AEFI ಗೆ ಸಂಬಂಧಪಟ್ಟ ಐಇಸಿ (ಮಾಹಿತಿ, ಶಿಕ್ಷಣ ಮತ್ತು ಸಂವಹನ) ಮಾದರಿಗಳು ಮತ್ತು ಸಂವಹನ ಯೋಜನೆಗಳನ್ನು ಹೆಚ್ಚಾಗಿ ಬಳಸಲು ಜಿಲ್ಲೆಗಳಿಗೆ ಸೂಚಿಸಲಾಗಿದೆ. 7. ಕೋವಿಡ್ ಲಸಿಕೆಗೆ ಸಂಬಂಧಿಸಿದಂತೆ ವೀಡಿಯೋಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ (Social Media) ಬಿತ್ತರಿಸಲಾಗಿದೆ. 8. ಕೋವಿಡ್ ಲಸಿಕೆ ಕುರಿತಂತಹ FAQ (ಪದೇ ಪದೇ ಕೇಳಲಾಗುವ ಪ್ರಶ್ನೆ)ಗಳಿಗೆ ಉತ್ತರಿಸುವ ಮೂಲಕ ಸಾರ್ವಜನಿಕರಲ್ಲಿ ತಿಳುವಳಿಕೆ ಮೂಡಿಸಲಾಗುತ್ತಿದೆ. 9. ಕೋವಿಡ್ ಲಸಿಕೆಯ ಅಡ್ಡಪರಿಣಾಮಗಳ ಅಪಪ್ರಚಾರ ಕುರಿತಂತೆ ಸರಿಯಾದ ಮಾಹಿತಿ ಪಡೆಯಲು ಭಾರತ ಸರ್ಕಾರದಿಂದ ಪ್ರಕಟವಾಗುವ ಮಾಹತಿಯನ್ನಷ್ಟೇ ಅವಲಂಬಿಸಲು ಮಾಹಿತಿ ನೀಡಲಾಗಿದೆ.
ಈ	ರಾಜ್ಯದ ಪ್ರತಿಯೊಬ್ಬರಿಗೂ ಉಚಿತ ಲಸಿಕೆ ನೀಡಲು ಸರ್ಕಾರದ ಕ್ರಮವೇನು	ಭಾರತ ಸರ್ಕಾರದ ಮಾರ್ಗಸೂಚಿಯಂತೆ 1ನೇ ಹಂತದಲ್ಲಿ ಆರೋಗ್ಯ ಕಾರ್ಯಕರ್ತರಿಗೆ 2ನೇ ಹಂತದಲ್ಲಿ ಮುಂಚೂಣಿ ಕಾರ್ಯಕರ್ತರಿಗೆ ಹಾಗೂ 3ನೇ ಹಂತದಲ್ಲಿ, 45 ರಿಂದ 59 ವರ್ಷದೊಳಗಿನ ಸಹ ಅಸ್ವಸ್ಥತೆ ಇಂದ ಬಳಲುತ್ತಿರುವ ರೋಗಿಗಳಿಗೆ ಹಾಗೂ 60 ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನವರಿಗೆ ಎಲ್ಲಾ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಕೋವಿಡ್ ಲಸಿಕೆಯನ್ನು ಉಚಿತವಾಗಿ ನೀಡಲಾಗುತ್ತಿದೆ.

ಆಕುಕ 38 ಎಸ್ ಎಂಎಂ 2021

(ಡಾ|| ಕೆ. ಸುಧಾಕರ್)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ

ವೈದ್ಯಕೀಯ ಶಿಕ್ಷಣ ಸಚಿವರು

ಅನುಬಂಧ

ಸಮಾರಂಭಗಳು / ಆಚರಣೆಗಳು	ಅವಕಾಶ ನೀಡಬಹುದಾದ ಸಾರ್ವಜನಿಕರ ಸಂಖ್ಯೆ	ಷರಾ
1. ಸಾಮಾಜಿಕ ಆಚರಣೆಗಳು / ಸಮಾರಂಭಗಳು		ಭಾರತ ಸರ್ಕಾರದ ಮಾರ್ಗಸೂಚಿಯಂತೆ 3.25 sq.meter per person ಮಾನದಂಡವನ್ನು ಪಾಲಿಸುವುದು ಕಡ್ಡಾಯವಾಗಿರುತ್ತದೆ.
• ಮದುವೆ	500 ಮೀರದಂತೆ	ತೆರೆದ ಪ್ರದೇಶಗಳು
	200 ಮೀರದಂತೆ	ಸಭಾಂಗಣಗಳು / ಹಾಲ್‌ಗಳು , ಇತ್ಯಾದಿ ಮುಚ್ಚಿದ ಪ್ರದೇಶಗಳು
• ಜನ್ಮದಿನ ಹಾಗೂ ಇತರ ಆಚರಣೆಗಳು	100 ಮೀರದಂತೆ 50 ಮೀರದಂತೆ	ತೆರೆದ ಪ್ರದೇಶಗಳು ಸಭಾಂಗಣಗಳು / ಹಾಲ್‌ಗಳು , ಇತ್ಯಾದಿ ಮುಚ್ಚಿದ ಪ್ರದೇಶಗಳು
• ನಿಧನ / ಶವಸಂಸ್ಕಾರ	100 ಮೀರದಂತೆ 50 ಮೀರದಂತೆ	ತೆರೆದ ಪ್ರದೇಶಗಳು ಸಭಾಂಗಣಗಳು / ಹಾಲ್‌ಗಳು , ಇತ್ಯಾದಿ ಮುಚ್ಚಿದ ಪ್ರದೇಶಗಳು
• ಅಂತ್ಯ ಕ್ರಿಯೆ (Cremation/burial)	50 ಮೀರದಂತೆ	
• ಇತರೆ ಸಮಾರಂಭಗಳು	100 ಮೀರದಂತೆ	ಹಾಲ್‌ನ ವಿಸ್ತೀರ್ಣಕ್ಕೆ ಅನುಗುಣವಾಗಿ
2. ಧಾರ್ಮಿಕ ಆಚರಣೆಗಳು / ಸಮಾರಂಭಗಳು	500 ಮೀರದಂತೆ	ತೆರೆದ ಪ್ರದೇಶಗಳು
3. ರಾಜಕೀಯ ಆಚರಣೆಗಳು / ಸಮಾರಂಭಗಳು	500 ಮೀರದಂತೆ	ತೆರೆದ ಪ್ರದೇಶಗಳು